ಓ ಎಸ ನಂಃ 129-10

ಪಿ ಡಬ್ಲ್ಯುಃ 1

ದಿನಾಂಕಃ 12-08-2014

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಶ್ರೀ ಎಸ್ ಎ ಕೆ ವಕೀಲರಿಂದ

ನನ್ನ ವಯಸ್ಸು ದಾವಾದ ವಾದ ಪತ್ರದಲ್ಲಿ ಉದ್ದೇಶ ಪೂರ್ವಕವಾಗಿ ಕಡಿಮೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೆಲ್ಲರಿಗೂ ಈಗ 60 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿತ್ತು ಎಂದರೆ ಸಾಕ್ಷಿಯು ನೀವು ಹೇಳಿದ ರೀತಿ ಇರಬಹುದು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಮಸಾರಿ ಜಮೀನಾಗಿದ್ದು ಒಳ್ಳೆಯ ಜಮೀನು ಆಗಿರುವುದಿಲ್ಲ. ದಾವಾ ಆಸ್ತಿಯ ಮೌಲ್ಯವು ದಾವಾ ಮಾಡುವ ಸಂದರ್ಬದಲ್ಲಿ ಎಷ್ಟು ಇತ್ತು ಎಂದು ಹೇಳಲು ಬರುವುದಿಲ್ಲ. ವಾದ ಪತ್ರದಲ್ಲಿ ದಾವಾ ಆಸ್ತಿಯ ಮೌಲ್ಯ ಎಷ್ಟು ಎಂದು ಹೇಳಿ ಬರೆಸಿಲ್ಲ. ಒಂದು ಎಕರೆಗೆ ಕಿಮ್ಮತ್ತು ರೂ.2 ರಿಂದ 2 ವರೆ ಲಕ್ಷ ಇರುತ್ತದೆ. ಈ ದಾವೆ ಮಾಡುವಾಗ ಇದೇ ಮೌಲ್ಯ ಇತ್ತು ಎಂದರೆ ಸರಿ. ಈಗ 1 ಎಕರೆಗೆ 4 ಲಕ್ಷ ಆಗುತ್ತದೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ವಂಶವೃಕ್ಷದಲ್ಲಿ ವಯಸ್ಸಿನ ಅನುಕ್ರಮವಾಗಿ ಪಕ್ಷಗಾರರನ್ನು ತೋರಿಸಿಲ್ಲ ಮತ್ತು ಪಕ್ಷಗಾರರ ವಯಸ್ಸು ನನಗೆ ಗೊತ್ತಾಗುವುದಿಲ್ಲ. ನಮ್ಮಲ್ಲಿ ದೊಡ್ಡವರು ಗಂಗವ್ವ ಅವರ ನಂತರ ಪಾರವ್ವ, ಅವರ ನಂತರ ಚಂದ್ರವ್ವ, ಅವರ ನಂತರ ಸಂಗವ್ವ, ಅವರ ನಂತರ ಮಲ್ಲಪ್ಪ, ಅವರ ನಂತರ ನೀಲವ್ವ ಇರುತ್ತಾರೆ. ಗಂಗವಗಿಂತ ಒಂದು ವರ್ಷ ಚಿಕ್ಕವರು ಪಾರವ್ವ ಎಂದರೆ ಸರಿ. ಇವರಿಗಿಂತ ಒಂದು ವರ್ಷ ಚಿಕ್ಕವರು ಚಂದ್ರವ್ವ ಎಂದರೆ ಸರಿ. ಇವರಿಗಿಂತ ಒಂದು ವರ್ಷ ಚಿಕ್ಕವರು ಸಂಗವ್ವ ಎಂದರೆ ಸರಿ. ಸಂಗವ್ವನಿಗಿಂತ ಒಂದು ವರ್ಷ ಚಿಕ್ಕವರು ಮಲ್ಲಪ್ಪ, ಇವರಿಗಿಂತ ಒಂದು ವರ್ಷ ಚಿಕ್ಕವರು ನೀಲವ್ವ ಎಂದರೆ ಸರಿ. ಮಲ್ಲಪ್ಪ 30 ವರ್ಷದ ಹಿಂದೆ ಮೃತರಾಗಿರುತ್ತಾರೆ ಎಂದರೆ ಸರಿ. ಆತ ಮರಣ ಹೊಂದಿದಾಗ ಆತನ ವಯಸ್ಸು 35 ರಿಂದ 40 ಆಗಿತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ.

ದಾವಾ ಆಸ್ತಿಗಳು ಯಾವ ಕಾಲದಲ್ಲಿ ನನ್ನ ತಂದೆಯ ಮಾಲಿಕತ್ವದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಹೌದು ಆದರೆ ನನ್ನ ತಾತನ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾತನ ಆಸ್ತಿ ಎಂದು ಯಾವುದೇದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾತನ ಆಸ್ತಿ ಎಂದು ಈ ಪ್ರಕರಣ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಅಜ್ಜ ಯಾವಾಗ ಮೃತರಾದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ನನ್ನ ತಾತನಿಗಿಂತ ಮೊದಲೇ ಮೃತರಾಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಮೃತರಾಗುವ ಸಮಯದಲ್ಲಿ ಆತನಿಗೆ ಆಸ್ತಿ ಇತ್ತು, ದಾವಾ ಆಸ್ತಿಗಳೇ ಸದರಿ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿಗಳು ನನ್ನ ತಂದೆಯ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೃತರಾದಾಗ ನನಗೆ 20 ವರ್ಷ ವಯಸ್ಸಾಗಿತ್ತು. ನನ್ನ ಮದುವೆಯನ್ನು ನನ್ನ ತಾಯಿ ಮಾಡಿರುತ್ತಾರೆ. ನನ್ನ ತಾಯಿ ಮೃತರಾಗಿ ಸುಮಾರು 5-6 ವರ್ಷಗಳಾಗಿರುತ್ತವೆ. ನಾನು ಮತ್ತು ಪ್ರತಿವಾದಿಯರು ಪರಿಶಿಷ್ಟ ಪಂಗಡ ಮತ್ತು ಜಾತಿಗೆ ಸೇರಿದವರು ಎಂದರೆ ಸರಿ.

ಮಲ್ಲಪ್ಪನಿಗೆ ಒಬ್ಬ ಪಕ್ಕಿರಪ್ಪ ಲಮಾಣಿ ಎಂಬುವರಿಂದ ಆಸ್ತಿ ಬಂದಿರುತ್ತದೆ ಎಂದರೆ ಸರಿಯಲ್ಲ. ಮಲ್ಲಪ್ಪನನ್ನು ಪಕ್ಕೀರಪ್ಪ ಲಮಾಣಿಯವರು ಸಾಕಿರುತ್ತಾರೆ ಎಂದರೆ ಸರಿಯಲ್ಲ. ಪಕ್ಕೀರಪ್ಪ ಲಮಾಣಿ ನಮ್ಮ ಕುಟುಂಬಕ್ಕೆ ಯಾವುದೇ ರೀತಿ ಸಂಬಂದಪಟ್ಟಿಲ್ಲ ಎಂದರೆ ಸರಿಯಲ್ಲ. ಪಕ್ಕೀರಪ್ಪ ಲಮಾಣಿಯವರ ಚಾಕ್ರಿಯನ್ನು ಮಲ್ಲಪ್ಪ ರವರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಕ್ಕೀರಪ್ಪ ಲಮಾಣಿಯವರಿಂದ 2 ನೇ ಪ್ರತಿವಾದಿಯ ಗಂಡ ಮತ್ತು 3 ರಿಂದ 6ನೇ ಪ್ರತಿವಾದಿಯರ ತಂದೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರದಿದ್ದರೂ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ರೆವಿನ್ಯೂ ಅಧಿಕಾರಿಗಳ ಜೊತೆ ಮಿಲಾಪಿಯಾಗಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ಮಲ್ಲಪ್ಪನ ಆಸ್ತಿಯ ಸಂಬಂಧಿಕರು ಎಂದು ಹೆಸರನ್ನು ಹಚ್ಚಿಕೊಂಡಿರುತ್ತೇವೆ. ದಾವಾ ಆಸ್ತಿಯು ಮಲ್ಲಪ್ಪನ ಹೆಸರಿನಲ್ಲಿ ಇರಲಿಲ್ಲ. ನನ್ನ ತಾಯಿ ನಮ್ಮೆಲ್ಲರ ಹೆಸರನ್ನು ಹಚ್ಚಿರುತ್ತಾರೆ. 21 ವರ್ಷಗಳ ಹಿಂದೆ ನಮ್ಮೆಲ್ಲರ ಹೆಸರನ್ನು ನನ್ನ ತಾಯಿ ಹಚ್ಚಿಸಿರುತ್ತಾರೆ. ನಮ್ಮ ಹೆಸರನ್ನು ಹಚ್ಚುವ ಪೂರ್ವದಲ್ಲಿ ನಮ್ಮ ತಾತನ ಹೆಸರು ಇತ್ತು. ನನ್ನ ತಯಿ ನಮ್ಮ ಹೆಸರು ಹಚ್ಚಿದ ಬಗ್ಗೆ ದಾಖಲೆ ಇರಬಹುದು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮಲ್ಲಪ್ಪನಿಗೆ ವಾರಸುದಾರನೆಂದು ಹೇಳಿ ನಾವು ಹೆಸರನ್ನು ಹಚ್ಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮಲ್ಲಪ್ಪನ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಮೃತ ಮಲ್ಲಪ್ಪನ ಹೆಂಡತಿ ಎಂದರೆ ಸರಿ. 3 ರಿಂದ 6 ನೇ ಪ್ರತಿವಾದಿಯರು ಮಲ್ಲಪ್ಪನ ಮಕ್ಕಳು ಎಂದರೆ ಸರಿ. ನಾನು ಮತ್ತು ಇತರೆ ವಾದಿಯರು ಮೃತ ಮಲ್ಲಪ್ಪನ ಸಹೋದರಿಯರು ಎಂದರೆ ಸರಿ.

ನನ್ನ ತಂದೆ ಜೀವಿತಾವಧಿಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತವಾಗಿದ್ದಾಗ ಗಂಗವ್ವ ಮತ್ತು ನೀಲವ್ವರ ಮದುವೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ಗಂಗವ್ವ ಮತ್ತು ಪಾರವ್ವರ ವಿವಾಹ ಮಾಡಿಸಿದ್ದು ಉಳಿದ ಸಹೋದರಿಯರ ವಿವಾಹವನ್ನು ಹಾಗೂ ನನ್ನ ವಿವಾಹವನ್ನು ನನ್ನ ತಾಯಿ ಮಾಡಿಸಿರುತ್ತಾರೆ. ಗಂಗಟವ್ವ ಮತ್ತು ಆಕೆಯ ಗಂಡ ಸೇರಿ ಉಳಿದ ಹೆಣ್ಣು ಮಕ್ಕಳ ವಿವಾಹವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)**

ಓ.ಹೆ.ಕೆ. ಸರಿ ಅದೆ.

ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ
ಸವಣೂರ.